**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 521/2024**

**ಸಿ.ಡಬ್ಲ್ಯೂಃ 2**

**ಪಿ.ಡಬ್ಲೂಃ 3**

**ಸಾಕ್ಷಿದಾರರ ಹೆಸರು ಃ ಭರತ್ ಕುಮಾರ್ ಸಿ**

**ತಂದೆಯ ಹೆಸರು ಃ ಚಿಕ್ಕೇಗೌಡ**

**ವಯಸ್ಸು ಃ 34 ವರ್ಷ**

**ಉದ್ಯೋಗ ಃ ಅಬಕಾರಿ ಕಾನ್ಸ್‌ಟೇಬಲ್**

**ವಾಸಸ್ಥಳ ಃ ಚಿಕ್ಕಮಗಳೂರು**

**ದಿನಾಂಕಃ 19.01.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು ಫೆಬ್ರವರಿ 2024 ರಿಂದ ಜೂನ್ 2024 ರವರೆಗೆ ನ ರಾ ಪುರ ವಲಯದಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 20.3.2024 ರಂದು ಚಾಸಾ-1 ರವರೊಂದಿಗೆ ನ ರಾ ಪುರ ವಲಯದ ಬಿ ಹೆಚ್ ಕೈಮರದಲ್ಲಿ ಲೋಕಸಭಾ ಚುನಾವಣಾ ಹಿನ್ನಲೆಯಲ್ಲಿ ಗಸ್ತು ಕರ್ತವ್ಯದಲ್ಲಿರುವಾಗ್ಗೆ ರಾತ್ರಿ 8.15 ಸಮಯದಲ್ಲಿ ನ ರಾ ಪುರದಿಂದ ಬಾಳೆಹೊನ್ನೂರು ಕಡೆಗೆ ಬಿಳಿ ಬಣ್ಣದ ಹೋಮ್ನಿ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡುತ್ತಿದ್ದಾರೆಂಬ ಮಾಹಿತಿ ಚಾಸಾ-1 ರವರಿಗೆ ಬಂದಿದ್ದು, ನಂತರ ಬಿ ಹೆಚ್ ಕೈಮರದಲ್ಲಿದ್ದ ಗ್ರಾಮಸ್ಥರನ್ನು ಪಂಚರಾಗಿ ಸಹಕರಿಸಬೇಕೆಂದು ಕೋರಿದ್ದು ಸದರಿಯವರು ರಾತ್ರಿ ಸಮಯವಾದ್ದರಿಂದ ಪಂಚ ಸಾಕ್ಷಿದಾರರಾಗಿ ಬರಲು ಒಪ್ಪಲಿಲ್ಲ ಆ ಕಾರಣ ಚಾಸಾ-1 ರವರು ನನಗೆ ಮತ್ತು ಚಾಸಾ-3 ರವರಿಗೆ ಪಂಚ ಸಾಕ್ಷಿದಾರರಾಗಿ ಸಹಕರಿಸಬೇಕೆಂದು ತಿಳಿಸಿರುತ್ತಾರೆ. ನಂತರ ಬಿ ಹೆಚ್ ಕೈಮರದಿಂದ ಒಂದುವರೆ ಕಿ ಮೀ ದೂರದಲ್ಲಿರುವ ದೀಪ್ತಿ ಸರ್ಕಲ್ ಬಳಿ ಗಸ್ತು ನಡೆಸುತ್ತಿದ್ದ ಸಂದರ್ಭದಲ್ಲಿ ಒಂದು ಬಿಳಿ ಬಣ್ಣದ ಹೋಮ್ನಿ ವಾಹನ ಸಂಃ ಕೆಎ-18-ಝಡ್-1931 ಆ ಮಾರ್ಗದಲ್ಲಿ ಬಂದಿದ್ದು ಅದನ್ನು ತಡೆದು ನಿಲ್ಲಿಸಿ ಪರಿಶೀಲಿಸಿದೆವು. ಸದರಿ ವಾಹನದ ಚಾಲಕ ಆರೋಪಿತರು ಸದರಿ ವಾಹನದಲ್ಲಿದ್ದ ಅಕ್ರಮ ಮದ್ಯ ಸಾಗಾಟದ ಬಗ್ಗೆ ವಿಚಾರಿಸಲಾಗಿ ಅವರು ಅದರ ಬಗ್ಗೆ ಸೂಕ್ತ ಉತ್ತರ ನೀಡಲಿಲ್ಲ. ನಂತರ

ಶೋಧನಾ ಸಮುಚ್ಚಿತ ವಾರೆಂಟನ್ನು ತಯಾರಿಸಿಕೊಂಡು ಪಂಚರಾದ ನಾನು ಮತ್ತು ಚಾಸಾ-3 ರವರ ಸಮಕ್ಷಮ ವಾಹನವನ್ನು ಪರಿಶೀಲಿಸಲಾಗಿ ಸದರಿ ವಾಹನದ ಸೀಟಿನ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದನ್ನು ಶೋಧನೆ ಮಾಡಲಾಗಿ ಅದರಲ್ಲಿ ಮದ್ಯ ತುಂಬಿದ 180 ಮಿಲಿಯ 20 ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳು, 90 ಮಿಲಿಯ 10 ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳು ಒಟ್ಟು 4.50 ಲೀ ಮದ್ಯ ಕಂಡು ಬಂದಿರುತ್ತದೆ. ಸದರಿ ಮದ್ಯವನ್ನು ಎಲ್ಲಿಂದ ಮತ್ತು ಯಾರಿಂದ ಖರೀದಿ ಮಾಡಿರುತ್ತೀರಿ ಎಂದು ಆರೋಪಿತರನ್ನು ಕೇಳಲಾಗಿ ಸೂಕ್ತ ದಾಖಲೆ ಮತ್ತು ಉತ್ತರ ನೀಡಲಿಲ್ಲ. ಮೇಲ್ಕಂಡ ಎಲ್ಲಾ ಮದ್ಯವನ್ನು ಒಂದು ಬಿಳಿ ಚೀಲದಲ್ಲಿ ಹಾಕಿ ಕಟ್ಟಿ 353 ಎಂದು ಇಲಾಖ ಸೀಲು ಮಾಡಿ ಗುರುತಿನ ಚೀಟಿ ಹಾಗೂ ಅದರ ಮೇಲೆ ನಮ್ಮಗಳ ಸಹಿ ಪಡೆಯಲಾಯಿತು.

ಈಗ ಸಾಕ್ಷಿಯು ಸದರಿ ಸ್ವತ್ತು ಸ್ವಾಧೀನ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 , ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. (ಆರೋಪಿತರು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಆರೋಪಿತರ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ)

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಜಿ ಡಿವಕೀಲರಿಂದಃಃ**

ದೀಪ್ತಿ ಸರ್ಕಲ್ ಬಳಿ ತಾಲ್ಲೂಕು ಕಚೇರಿ ಇದ್ದು, ಸದರಿ ಕಚೇರಿಯ ಒಳಗೆ ನಮ್ಮ ಅಬಕಾರಿ ಕಚೇರಿ ಇದೆ ಎಂದರೆ ಸರಿ. ಬಾತ್ಮಿದಾರರಿಂದ ಚಾಸಾ-1 ರವರಿಗೆ ಮಾಹಿತಿ ಬಂದ ಸಂದರ್ಭದಲ್ಲಿ ನಾವು ಬಿ ಹೆಚ್ ಕೈಮರದ ಬಳಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದೆವು. ಚಾಸಾ-1 ರವರಿಗೆ ಬಾತ್ಮಿದಾರರಿಂದ ಮಾಹಿತಿ ಆ ದಿನ ರಾತ್ರಿ 8.15 ಕ್ಕೆ ಬಂದಿರುತ್ತದೆ. ಪ್ರಶ್ನಿತ ವಾಹನವನ್ನು ಪರಿಶೀಲಿಸುವ ಪೂರ್ವದಲ್ಲಿ ನಾವು ಬೇರೆ ಎರಡು ವಾಹನಗಳನ್ನು ಪರಿಶೀಲಿಸಿದ್ದೆವು. ಬಿ ಹೆಚ್ ಕೈಮರ ಮತ್ತು ದೀಪ್ತಿ ಸರ್ಕಲ್ ಬಳಿ ಇದ್ದ ಸಾರ್ವಜನಿಕರನ್ನು ಮತ್ತು ಸ್ಥಳೀಯ ನಿವಾಸಿಗಳನ್ನು ಪಂಚ ಸಾಕ್ಷಿದಾರರಾಗಿ ಸಹಕರಿಸುವಂತೆ ನಾವು ಕೇಳಿಕೊಂಡಿದ್ದೆವು ಸಾಕ್ಷಿ ಮುಂದುವರೆದು ಅವರು ಪಂಚ ಸಾಕ್ಷಿದಾರರಾಗಿ ಸಹಕರಿಸಲು ಒಪ್ಪಲಿಲ್ಲ ಎಂದು ನುಡಿಯುತ್ತಾರೆ. ಸದರಿ ಬಿ ಹೆಚ್ ಕೈಮರ ಮತ್ತು ದೀಪ್ತಿ ಸರ್ಕಲ್ ಬಳಿ ಇದ್ದ ಸಾರ್ವಜನಿಕರಿಗೆ ಮತ್ತು ಸ್ಥಳೀಯ ನಿವಾಸಿಗಳಿಗೆ ಪಂಚ ಸಾಕ್ಷಿದಾರರಾಗಿ ಸಹಕರಿಸುವಂತೆ ಯಾವುದೇ ಲಿಖಿತ ನೋಟೀಸನ್ನು ನಾವು ನೀಡಲಿಲ್ಲ. ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಚಾಸಾ-1 ರವರು ಆರೋಪಿತರಿಂದ ಯಾವುದೇ ಅಕ್ರಮ ಮದ್ಯವನ್ನು ಬಿಳಿ ಬಣ್ಣದ ಹೋಮ್ನಿ ವಾಹನ ಸಂಃ ಕೆಎ-18-ಝಡ್-1931 ಇಂದ ಜಪ್ತು

ಮಾಡಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ನಿಪಿ-6 ಸ್ವಾಧೀನ ಮಹಜರನ್ನು ನನ್ನ ಸಮಕ್ಷಮ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ನ್ನು ಅಬಕಾರಿ ಇಲಾಖಾ ಕಚೇರಿಯಲ್ಲಿ ತಯಾರು ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ನಿಪಿ-6 ಕ್ಕೆ ನನ್ನ ಸಹಿಯನ್ನು ಅಬಕಾರಿ ಇಲಾಖಾ ಕಚೇರಿಯಲ್ಲಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಸಾರ್ವಜನಿಕರು ಪಂಚ ಸಾಕ್ಷಿದಾರರಾಗಿ ಸಹಕರಿಸಲು ನಿರಾಕರಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**